## ಮಣಿಗಳಲ್ಲಿ ಮೂರ್ತಿಗಳು

ಕರಕುಶಲ ಕಲೆ ಹೆಣ್ಣಿಗೆ ದೈವದತ್ತ ವರ. ಮನೆಯನ್ನು ಅಲಂಕರಿಸಲು ದುಬಾರಿ ಬೆಲೆ ತೆತ್ತು ತರುವ ಸುಂದರ ವಸ್ತುಗಳು ಮನಸ್ಸಿಗೆ ಮುದ ನೀಡುತ್ತವೆಯಾದರೂ ನಮ್ಮ ಕೈಯಾರೆ ಮಾಡುವ ವಸ್ತುಗಳು ಇನ್ನೂ ಹೆಚ್ಚಿನ ಖುಷಿ ಕೊಡುತ್ತದೆ. ಚಿತ್ರದಲ್ಲಿರುವ ಲಕ್ಷ್ಮೀವೆಂಕಟೇಶ ದೇವರನ್ನು ಬಣ್ಣ ಬಣ್ಣದ ಮಣಿಗಳಿಂದ ಲೀಲಾವತಿ ಕೆ. ಕುಲಕರ್ಣಿ ಎಂಬುವರು ಹೆಣೆದಿದ್ದಾರೆ. 55 ಸೆ.ಮೀ, 48ಸೆ.ಮೀ. ಎತ್ತರವಿರುವ ಈ ಮೂರ್ತಿಗಳು ಬಹಳ ಚಿತ್ತಾಕರ್ಷಕವಾಗಿವೆ. ಅಷ್ಟೇ ಅಲ್ಲ ಈ ಮಣಿಗಳಿಂದ ಭಗವದ್ಗೀತೆ ಸಂದೇಶ ಸಾರುವಂಥ, ಮಂಟಪ, ತೊಟ್ಟಿಲು ಸಮೇತ ನೂರಾರು ಮಾದರಿಗಳನ್ನು ಅತ್ಯಂತ ಸುಂದರವಾಗಿ ತಯಾರಿಸಿದ್ದಾರೆ.

—ಭಾಗ್ಯಲಕ್ಷ್ಮೀ ಆನಂದ, ಬೆಂಗಳೂರು





## ಸಂತೆಬೆನ್ನೂರು ಪುಷ್ಕರಣಿ

ದಕ್ಷಿಣ ಭಾರತದಲ್ಲೇ ಕಂಡರಿಯದ ಅಪೂರ್ವ ಪುಷ್ಕರಣಿ ಇದು. ವಿಜಯನಗರ ಆಳರಸರ ಸಂತೆಬೆನ್ನೂರು ಪ್ರಾಂತ್ಯದ ಸಾಮಂತ ನಾಯಕ ಕೆಂಗಲ್ ಹನುಮಂತಪ್ಪ ನಾಯಕ, ಈ ಪುಷ್ಕರಣಿಯನ್ನು ಬಿಜಾಪುರದ ಸುಲ್ತಾನರ ಮೇಲೆ ವಿಜಯ ಸಾಧಿಸಿದ ಸವಿನೆನಪಿಗಾಗಿ 16ನೇ ಶತಮಾನದಲ್ಲಿ ಕಟ್ಟಿಸಿದರು ಎನ್ನಲಾಗಿದೆ. ಕ್ರಮೇಣ ಇದಕ್ಕೆ 'ವಸಂತ ಮಂಟಪ' ಎಂದು ನಾಮಕರಣ ಮಾಡಲಾಗಿದ್ದು, ವಿಶಾಲ ಹೊಂಡ (240X230) ಆಯದಲ್ಲಿ ನಾಲ್ಕು ಕಡೆ ಸೋಪಾನ, ಪುಷ್ಕರಣಿಯ ಎಂಟು ದಿಕ್ಕುಗಳಲ್ಲಿ ಒಂದೊಂದು ಮೀನಾರ್ ರಚನೆಯಾಗಿದೆ. ಇಟ್ಟಿಗೆ ನಯಗಾರೆಯಲ್ಲಿ, ಹಿಂದೂ ಇಸ್ಲಾಮಿಕ್ ಶೈಲಿಯಲ್ಲಿ ಅದ್ಭುತ ಕಲಾವಂತಿಕೆಯೊಂದಿಗೆ ಕಟ್ಟಡದ ಕಲ್ಲುಗಳು, ಬೆಲ್ಲದ ಅಚ್ಚಿನೋಪಾದಿಯಲ್ಲಿ ಪ್ರತಿಷ್ಠಾಪಿಸಿದೆ. ಪುಷ್ಕರಣಿ ಮಧ್ಯಭಾಗದಲ್ಲಿ ಬಹು ಅಂತಸ್ತಿನ ಗೊಮ್ಮಜ್ ಮಂಟಪ ಕಂಗೊಳಿಸುತ್ತದೆ. ದಾವಣಗೆರೆಯ ಚನ್ನಗಿರಿ ತಾಲ್ಲೂಕಿನಲ್ಲಿರುವ ಈ ಪುಷ್ಕರಣಿಯನ್ನು ನೋಡಲು ನಿತ್ಯ ಸಾವಿರಾರು ಪ್ರವಾಸಿಗರು ಬರುತ್ತಾರೆ.

—ಎಂ. ಮೃತ್ಯುಂಜಯಪ್ಪ, ಚಿತ್ರದುರ್ಗ

ನೀವು ಕಂಡ ಅಚ್ಚರಿಯ ಸಂಗತಿ, ವಿಷಯ, ವಸ್ತುವಿನ ಕುರಿತು 100 ಶಬ್ದಗಳಲ್ಲಿ ಪುಟ್ಟ ಬರಹವನ್ನು ಬರೆದು ಕಳುಹಿಸಿ. ಜೊತೆಗೊಂದು ಚೆಂದದ ಚಿತ್ರ ಇರಲೇಬೇಕು.
**ಇಮೇಲ್ ವಿಳಾಸ: editorsu@sudha.co.in**

## ಸಾವಿರ ಸೈನಿಕರಿಗೆ ಸಮನಾದ ಫಿರಂಗಿ

ಸುಮಾರು 15 ಅಡಿ ಉದ್ದ, 4 ಟನ್ ತೂಕವಿರುವ ಈ ಕಿರಿ ಫಿರಂಗಿಯ ಸಾಧನೆ ಮಾತ್ರ ಹಿರಿದು. ಇದು ಬಹಮನಿ ಸುಲ್ತಾನರು ನಿರ್ಮಿಸಿದ ಗೋಲ್ಕೊಂಡ ಕೋಟೆಯ ಪೂರ್ವ ದಿಕ್ಕಿನ ಬುರುಜಿನ ಮೇಲಿದೆ. ದೆಹಲಿ ಸುಲ್ತಾನ ಔರಂಗಜೇಬ್‌ನ ಸೈನಿಕರು ಈ ಕೋಟೆ ವಶಪಡಿಸಿಕೊಳ್ಳಲು ನಾಲ್ಕು ಭಾರಿ ಪ್ರಯತ್ನಿಸಿದರೂ ಈ ಫಿರಂಗಿ ದೆಸೆಯಿಂದ ವಿಫಲರಾದರು. ತಾನು ಉಗುಳಿದ ಗುಂಡಿನ ದಾಳಿಗೆ ಸಾವಿರಕ್ಕೂ ಅಧಿಕ ಸೈನಿಕರು ಸತ್ತಿದ್ದರಿಂದ ಇದನ್ನು 'ಸಾವಿರ ಸೈನಿಕರಿಗೆ ಸಮ'ನಾದುದೆಂದು ಕರೆದರಂತೆ. ಕ್ರಿ.ಶ. 1300ರಲ್ಲಿ ಎರಕ ಹೊಯ್ದು ಸ್ಥಾಪಿಸಿದ ಈ ಫಿರಂಗಿ ಇಂದಿಗೂ ಕೂಡ ಗಾಳಿ, ಮಳೆ, ಬಿಸಿಲಿಗೆ ಅಂಜದೆ, ತುಕ್ಕು ಹಿಡಿಯದೆ ಸತ್ತಂತೆ ಬಿದ್ದಿದೆ.

—ಎಸ್. ಓಂಕಾರಯ್ಯ ತವನಿಧಿ, ದಾವಣಗೆರೆ

